ಹಿಂದೆ ಇಲ್ಲಿ ಒಂದು ಲೆಕ್ಕ ಸಹಿತ ಶಾಖಾ ಕಛೇರಿಯಿದ್ದು ೩೦೦ಕ್ಕಿಂತಲ್ಲೂ ಕಡಿಮೆ ಲೆಕ್ಕ (ಖಾತೆ) ಗಳಿದ್ದುದರಿಂದ ಅದನ್ನು ಗಜೇಂದ್ರಗಡಕ್ಕೆ ವರ್ಗಾಯಿಸಲಾಯಿತು. ಲೆಕ್ಕ ಸಹಿತ ಶಾಖೆಯಿರುವ ಕನಿಷ್ಟ ೩೦೦ ಖಾತೆಗಳಿರಬೇಕು.

ರಾಜ್ಯದಲ್ಲಿ ವಿಭಾಗ, ಉಪವಿಭಾಗ, ಪುನರ್ ರಚನೆಗೆ ಅಗತ್ಯ ಕಂಡು ಬಂದಿದ್ದು ಇದಕ್ಕಾಗಿ ಮಾಹಿತಿ ಸಂಗ್ರಹಿಸಲಾಗುತ್ತಿದೆ. ಗದಗ್ ವಿಭಾಗದ ಮಾಹಿತಿಯನ್ನು ಪಡೆಯಲಾಗಿತ್ತಿದೆ. ನರೇಗಲ್ ಗದಗ್ ವಿಭಾಗದ ಮಾಹಿತಿಯನ್ನು ಪಡೆಯಲಾಗುತ್ತಿದೆ ನರೇಗಲ್ ಗದಗ್ ವಿಭಾಗಕ್ಕೆ ಬರುತ್ತಿದೆ ಗದಗ್ ವಿಭಾಗದ ಪುನರ್ ರಚನೆ ಪ್ರಸ್ತಾಪ ಪರಿಶೀಲನೆಯಲ್ಲಿದೆ. ನರೇಗಲ್‌ನಲ್ಲಿ ಲೆಕ್ಕ ಪತ್ರ ಸಹಿತ ಶಾಖಾ ಕಛೇರಿ ಆರಂಭಿಸುವುದನ್ನು ಗದಗ್ ವಿಭಾಗದ ಪುನರ್‌ರಚನೆ ಕಾಲದಲ್ಲಿ ಪರಿಶೀಲಿಸಲಾಗುತ್ತದೆ. ಪುನರ್ ರಚನೆಯನ್ನು ಮುಂಡಳಿಯ ಆರ್ಥಿಕ ಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಮಾಡಿ ಕನಿಷ್ಟ ಅಗತ್ಯ ಪೂರೈಸಲು ಕ್ರಮ ಕೈಗೊಳ್ಳಲಾಗುತ್ತಿದೆ.

೧೦) ಹೆಗ್ಗಡದೇವನಕೋಟೆ ತಾಲ್ಲೂಕಿಗೆ ಪ್ರತ್ಯೇಕವಾದ ಮಾರುಕಟ್ಟೆ ಸಮಿತಿ ಯನ್ನು ಸಂತೆ ಸರಗೂರಿನಲ್ಲಿ ಮಾಡಲು ಒತ್ತಾಯ

ಶ್ರೀ ಎಂ. ಶಿವಣ್ಣ.— ಮಾನ್ಯ ಅಧ್ಯಕ್ಷರೆ, ಮೈಸೂರು ಜಿಲ್ಲೆ ನಂಜನಗೂಡು ವ್ಯವಸಾಯೋತ್ಪನ್ನ ಮಾರಕಟ್ಟೆ ಸಮಿತಿಗೆ ನಂಜನಗೂಡು ಗುಂಡ್ಲುಪೇಟೆ (ತರಕಣಾಂಬಿ ಹೋಬಳಿ ರಹಿತ) ಪತ್ತು ಹೆಗ್ಗಡದೇವನಕೋಟೆ ತಾಲ್ಲೂಕುಗಳು ಸೇರಿ ನಂಜನಗೂಡು ಪ್ರಮುಖ ಮಾರುಕಟ್ಟೆ ಕೇಂದ್ರವಾಗಿರುತ್ತದೆ. ನಂಜನಗೂಡು ಮುಖ್ಯ ಮಾರುಕಟ್ಟೆ ಕೇಂದ್ರಕ್ಕೆ ಗುಂಡ್ಲುಪೇಟೆ ಸಂತೆ ಸರಗೂರು ಮತ್ತು ಹೆಗ್ಗಡದೇವನ ಕೋಟೆ ಈ ಮೂರು ಉಪ ಮಾರುಕಟ್ಟೆಗಳು ಸೇರ್ಪಡೆಯಾಗಿರುತ್ತವೆ.

ಹೆಗ್ಗಡದೇವನಕೋಟೆ ಹಾಗೂ ಸಂತೆಸರಗೂರು ಕೇಂದ್ರದಿಂದ ನಂಜನಗೂಡು ಮುಖ್ಯ ಮಾರುಕಟ್ಟೆ ಕೇಂದ್ರಕ್ಕೆ ಸುಮಾರು ೭೦ ಕಿ.ಮೀ. ಹಾಗೂ ೫೬ ಕಿ.ಮೀ. ಅಂತರವಿರುತ್ತದೆ. ಅಲ್ಲದೆ ಮೈಸೂರು ಜಿಲ್ಲಾ ಕೇಂದ್ರಕ್ಕೆ ಹೆಗ್ಗಡದೇವನಕೋಟೆ ಹಾಗೂ ಸಂತೆ ಸರಗೂರಿನಿಂದ ಕ್ರಮವಾಗಿ ೫೫ ಮತ್ತು ೫೯ ಕಿ.ಮೀ. ದೂರವಿರುತ್ತದೆ.

ಮೈಸೂರು ಜಿಲ್ಲೆಯಲ್ಲಿ ವಿಸ್ತೀರ್ಣದಲ್ಲಿ ಕೊಳ್ಳೇಗಾಲ ತಾಲ್ಲೂಕು ಬಿಟ್ಟರೆ ಹೆಗ್ಗಡದೇವನಕೋಟೆ ತಾಲ್ಲೂಕು ಎರಡನೆಯದು. ಇದರ ವಿಸ್ತೀರ್ಣ ೬೦೦ ಚದುರ ಮೈಲಿಗಳಾಗಿರುತ್ತದೆ. ಈ ತಾಲ್ಲೂಕು ಕಬಿನಿ ಜಲಾಶಯ, ತಾರಕ ಜಲಾಶಯ ಮತ್ತು ಹೆಬ್ಬಳ್ಳಿ ಜಲಾಶಯಗಳನ್ನು ಹೊಂದಿರುತ್ತದೆ.

ಹೆಗಡದೇವನಕೋಟೆ ತಾಲ್ಲೂಕಿನಲ್ಲಿ ಪ್ರಮುಖ ಬೆಳೆಗಳಾದ ಭತ್ತ ರಾಗಿ. ಎಳ್ಳು ಜೋಳ ಹುರುಳಿ, ಕಬ್ಬು ಹತ್ತಿ ಮತ್ತು ಸೂರ್ಯಕಾಂತಿ, ತರಕಾರಿ ಮತ್ತು ಹೂಗಸೊಪ್ಪು ಮುಂತಾದ ಬೆಳೆಗಳನ್ನು ರೈತರು ಬೆಳೆಯುತ್ತಿದ್ದಾರೆ. ಈ ಪ್ರದೇಶದಲ್ಲಿ ಟಿಂಬರ್ ಹೇರಳವಾಗಿದ್ದ ವರ್ಷಕ್ಕೆ ಎರಡು ಮೂರು ಸಾರಿ ಟಿಂಬರ್ ಹರಾಜು ಸಹ ಆಗುತ್ತದೆ. ಸದರಿ ಟಿಂಬರ್ ನಿಯಂತ್ರಣಕ್ಕೆ ಬಳಪಡದೇ ಇರುವುದರಿಂದ ಸಮಿತಿಗೆ ೨ ಲಕ್ಷ ರೂಪಾಯಿಗಳು ಆದಾಯ ಬರಲು ಕುಂಠಿತವಾಗುತ್ತದೆ ಇತ್ತೀಚೆಗೆ ಕಳೆದ ಆರು ತಿಂಗಳಿಂದ ಭಾನುವಾರ ದಿವಸದಲ್ಲಿ ಜಾನುವಾರು ಸಂತೆ ರಾಜೇಂದ್ರ ಸರ್ಕಲ್ ಬಳಿ ನಡೆಯುತ್ತಿದ್ದು ಸಮಿತಿಯಿಂದ ಯಾರು ನೋಡದೆ ಇರುವುದು ತುಂಬಾ ವಿಷಾದನೀಯವಾಗಿದ್ದು, ಇದರಿಂದ ರೈತರಿಗೆ ವ್ಯವಸ್ಥೆ ಇಲ್ಲದೆ ತುಂಬಾ ಅನಾನುಕೂಲವಾಗಿರುತ್ತದೆ.

ಮೈಸೂರು ಜಿಲ್ಲೆಯಲ್ಲಿ ಸಂತೆಸರಗೂರು ಪ್ರಮುಖ ವ್ಯಾಪಾರ ಕೇಂದ್ರವಾಗಿದ್ದು ಸಮಿತಿಯ ವಶಿಯಿಂದ ೬ ಎಕರೆ ಜಮೀನು ಕ್ರಯಕ್ಕೆ ಪಡೆದು ಈಗಾಗಲೇ ಅಭಿವೃದ್ಧಿ ಕೆಲಸಗಳು ನಡೆಯುತ್ತಿದ್ದು ಪೂರ್ಣಗೊಳ್ಳುವ ಮಟ್ಟದಲ್ಲಿದೆ.

ನಂಜನಗೂಡು ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿಗೆ ಮೂರು ತಾಲ್ಲೂಕುಗಳು ಸೇರಿ ಕೊಂಡಿರುವುದರಿಂದ ಇದರ ವಾರ್ಷಿಕ ಉತ್ಪತ್ತಿ ಎಲ್ಲಾ ತರಪಡಿಂದಲೂ ಸುಮಾರು ೨೦ ಲಕ್ಷ ರೂಪಾಯಿ ಗಳು ಆದಾಯ ಬರಬೇಕಾಗಿರತ್ತದೆ. ಆಡಳಿತ ವ್ಯವಸ್ಥೆ ಸಮರ್ಪಕವಾಗಿದ್ದು, ಇಲಾಖೆಯಿಂದ ಈ ಸಮಿತಿಯ ಕಾರ್ಯಾದರ್ಶಿ ಸ್ಥಾನಕ್ಕೆ ಹೊದಲನೇ ದರ್ಜೆ ನೌಕರರನ್ನು ನೇಮಿಸಿದಾಗಲೇ ಅವ್ಯವಸ್ಥೆಗೆ ಕಾರಣವಾಯಿತು.

ಹೆಗ್ಗಡದೇವನಕೋಟೆ ತಾಲ್ಲೂಕು ನಂಜನಗೂಡು ಸಮಿತಿಗೆ ಸೇರಿರುವುದರಿಂದ ಆಡಳಿತ ವ್ಯವಸ್ಥೆ ಸರಿಯಾಗಿ ನಡೆಯದೆ ಇರುವುದರಿಂದ ರೈತರಿಗೆ ತುಂಬಾ ಅನ್ಯಾಯವಾಗುವುದು ಮನಗಂಡು ಹೆಗ್ಗಡ

ದೇವನಕೋಟೆ ತಾಲ್ಲೂಕು ಪ್ರತ್ಯೇಕವಾದ ಸಮಿತಿಯ ರಚನೆಯನ್ನು ಸಂತೇಸರಗೂರಿನಲ್ಲಿ ಮಾಡಬೇಕೆಂದು. ಈಗಾಗಲೇ ಸರ್ಕಾರಕ್ಕೆ ಮನವಿಗಳನ್ನು ಕಳುಹಿಸಲಾಗಿದೆ. ಮತ್ತು ಹೆಗ್ಗಡದೇವನಕೋಟೆ ತಾಲ್ಲೂಕು ಪಂಚಾಯಿತಿ ಸಮಿತಿ ಸಭೆಯಲ್ಲಿಯೂ ನಿರ್ಣಯ ಮಾಡಿ ಸರ್ಕಾರಕ್ಕೆ ಕಳುಹಿಸಲಾಗಿದೆ.

ಆದ್ದರಿಂದ ಹೆಗ್ಗಡದೇವನಕೋಟೆಗೆ ಸಂಬಂಧಿಸಿದಂತೆ ಸಂತೆಸರಗೂರಿಗೆ ಒಂದು ಪ್ರತ್ಯೇಕ ಮೂರು ಕಟ್ಟೆ ಸಮಿತಿಯನ್ನು ರಚಿಸಬೇಕೆಂದು ಸರ್ಕಾರ ಮತ್ತು ಮಾನ್ಯ ಮಾರುಕಟ್ಟೆ ಸಚಿವರಲ್ಲಿ ಈ ಮೂಲಕ ಒತ್ತಾಯಿಸುತ್ತೇನೆ.

ಪ್ರೊ. ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿ ಮಾತ್ರಿಗಳ ಪರವಾಗಿ ಈ ಕೆಳಗಿನ ಹೇಳಿಕೆಯನ್ನು ನೀಡಬಯಸುತ್ತೇನೆ. ನಂಜನಗೂಡು ಮಾರುಕಟ್ಟೆಯು ಮೈಸೂರು ಜಿಲ್ಲೆಯಲ್ಲಿ ಒಂದು ನಿಯಂತ್ರಿತ ಮಾರುಕಟ್ಟೆಯಾಗಿರುತ್ತದೆ. ಈ ಮಾರುಕಟ್ಟೆ ಕ್ಷೇತ್ರವು ನಂಜನಗೂಡು ಹೆಗ್ಗಡದೇವನಕೋಟೆ ಮತ್ತು ಗುಂಡ್ಲುಪೇಟೆ ತಾಲ್ಲೂಕುಗಳನ್ನು (ತೆರೆಕ್ಕಾಬಿ ಹೋಬಳಿ ಬಿಟ್ಟು) ಒಳಗೊಂಡಿರುತ್ತದೆ. ಹೆಗ್ಗಡದೇವನಕೆ ಟೆ ತಾಲ್ಲೂಕಿನ ಸಂತೆಸರಗೂರಿನಲ್ಲಿ ೧೯೮೯ ಜೂನ್ ತಿಂಗಳಲ್ಲಿ ಒಂದು ಉಪ ಮಾರುಕಟ್ಟೆಯನ್ನು ಸ್ಥಾಪಿಸಲಾಗಿದೆ. ಈ ಉಪ ಮಾರುಕಟ್ಟೆ ಪ್ರಾಂಗಣ ನಿರ್ಮಾಣಕ್ಕಾಗಿ ೬ ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಂಡು ಈ ಕೆಳಗಿನ ಅಭಿವೃದ್ಧಿ ಕಾರ್ಯಗಳನ್ನು ರೈತನ ಹಿತದೃಷ್ಟಿಯಿಂದ ಕೈಗೊಳ್ಳಲಾಗಿದೆ.

೧)	ಪ್ರಾಂಗಣದ ಸುತ್ತುಗೋಡೆ ಮತ್ತು ತಂತಿ ಬೇಲಿ	... ರೂ.೦.೭೨ ಲಕ್ಷ
೨)	ನೀರು ಸರಬರಾಜು	... ರೂ.೦.೫೪ ಲಕ್ಷ
೩)	ಹರಾಜು ಕಟ್ಟೆಗಳ ನಿರ್ಮಾಣ (೨ರಷ್ಟು)	... ರೂ.೪.೦೦ ಲಕ್ಷ
೪)	ಚಿಲ್ಲರೆ ಅಂಗಡಿ ಮಳಿಗೆಗಳು	... ರೂ.೨.೪೫ ಲಕ್ಷ
೫)	ಕಛೇರಿ ಮತ್ತು ಗೋದಾಮು	... ರೂ.೧.೫೦ ಲಕ್ಷ
	ಒಟ್ಟು ರೂ.	೯.೨೫ ಲಕ್ಷ

ನಂಜನಗೂಡು ಮಾರುಕಟ್ಟೆ ಕ್ಷೇತ್ರದಲ್ಲಿ ಮರಮಾಟ್ಟುಗಳನ್ನು ನಿಯಂತ್ರಣ ಕ್ರಮಕ್ಕೆ ಸೇರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಜಿ ನಿವಾರಗಳನ್ನು ಈ ಮಾರುಕಟ್ಟೆ ಕ್ಷೇತ್ರದಲ್ಲಿ ಈಗಾಗಲೇ ನಿಯಂತ್ರಣಕ್ಕೆ ಒಳಪಡಿಸಿದ್ದು ಹೆಗ್ಗಡದೇವನಕೋಟೆಯು ರಾಜ್ಯದ ಸರ್ಕಾರಿಸ್ವಾಮ್ಯ ಪ್ರತಿ ಭಾನುವಾರ ನಡೆಯುವ ದನಗಳ ಸಂತೆಯಲ್ಲಿ ವ್ಯಾಪಾರಕಟ್ಟೆ ಕಾಯ್ದಿರಿಸಿಯನ್ನು ಜಾರಿಗೊಳಿಸಲು ಮಾರುಕಟ್ಟೆ ಸಮಿತಿಗೆ ಕಟ್ಟುನಿಟ್ಟಾದ ನಿರ್ದೇಶನ ನೀಡಲಾಗುವುದು. ಮಾರುಕಟ್ಟೆ ಸಮಿತಿಯು ಆದಾಯದ ವ್ಯವಸ್ಥೆಯಲ್ಲಿ ನಿಷ್ಕ್ರಿಯತೆ ಉಂಟಾಗಿರುವ ಬಗ್ಗೆ ಕಾರ್ಯದರ್ಶಿಯವರ ಮೇಲೆ ಈಗಾಗಲೇ ಇಲಾಖಾ ವಿಚಾರಣೆಯನ್ನು ನಡೆಸಲು ಸೂಕ್ತ ಕ್ರಮ ಕೈಗೊಳ್ಳಲಾಗಿದೆ,

ಮಾರುಕಟ್ಟೆ ಸಮಿತಿಗಳನ್ನು ವಿಭಜಿಸುವ ಬಗ್ಗೆ ಪರಿಶೀಲಿಸಿದ ಕೆಲವು ಪ್ರಸ್ತಾವಗಳ ಸಂದರ್ಭದಲ್ಲಿ ಮಿತವ್ಯಯದ ದೃಷ್ಟಿಯಿಂದ ೭ನೇ ಪಂಚವಾರ್ಷಿಕ ಯೋಜನೆಯ ಅಂತ್ಯದವರೆಗೆ ಯಾವುದೇ ಮಾರುಕಟ್ಟೆಯನ್ನು ವಿಭಜಿಸದಿರಲು ಸರ್ಕಾರವು ತೀರ್ಮಾನಿಸಿರುತ್ತದೆ. ಮಾರುಕಟ್ಟೆ ಸಮಿತಿಗಳ ರಚನೆ ಮಾಗೂ ಹುದ್ದೆಗಳು ಯಾವ ರೀತಿ ಇರಬೇಕೆಂದು ಅಧ್ಯಯನ ಮಾಡಿ ಶಿಫಸಲು ರಾಜ್ಯ ಕೃಷಿ ಮಾರಾಟ ಮಂಡಳಿಯ ವತಿಯಿಂದ ನೇಮಿಸಿದ ಪ್ರೊ. ಮಾನಸಸರೋವರ್ ನೇತೃತ್ವದ ವರದಿ ಕೇಳಿದ್ದು, ಸದರಿ ವರದಿ ತಯಾರಾಗಿ ಬಂದಿದ್ದು ಅದು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. ಆ ವರದಿಯು ಈಗಿರುವ ಮಾರುಕಟ್ಟೆ ಸಿಬ್ಬಂದಿ ವೆಚ್ಚವನ್ನು ಕೂಲಂಕುಷವಾಗಿ ಪರಿಶೀಲಿಸಿ ಅತೀ ಸಣ್ಣ ಅಂದರೆ ಆದಾಯದಲ್ಲಿ ಅತಿ ಚಿಕ್ಕದಾಗಿ ಆದಾಯ ಬರುವ ಮಾರುಕಟ್ಟೆಗಳನ್ನು ಸ್ಥಾಪಿಸುವ ಬಗ್ಗೆ ಯಾವುದಾದರೂ ಮುಂದಾವರಿಯುವ ಬಗ್ಗೆ ಸರ್ಕಾರ ತೀವ್ರವಾಗಿ ಪರಿಶೀಲಿಸಲು ಅಗತ್ಯವಿದೆಯೆಂದು ಅಭಿಪ್ರಾಯ ಪಟ್ಟಿರುತ್ತದೆ. ಮೇಲೆ ಹೇಳಿರುವ ಕಾರಣಗಳಿಂದ ಈ ಸಂದರ್ಭದಲ್ಲಿ ಹೆಗ್ಗಡದೇವನಕೋಟೆ ತಾಲ್ಲೂಕಿನ ಸಂತೆಸರಗೂರಿನಲ್ಲಿ ಒಂದೇ ಪ್ರತ್ಯೇಕವಾದ ಮಾರುಕಟ್ಟೆಯನ್ನು ಸ್ಥಾಪಿಸುವುದು ಸಮಂಜಸವಲ್ಲವೆಂದು ಪರಿಗಣಿಸಲಾಗಿದೆ. ಆದರೆ ಹೆಗ್ಗಡದೇವನಕೋಟೆ ತಾಲ್ಲೂಕಿನ ಸಂತೆಸರಗೂರಿನಲ್ಲಿ ಈಗಾಗಲೇ ಒಂದು ಉಪ ಮಾರುಕಟ್ಟೆಯನ್ನು ಸ್ಥಾಪಿಸಲಾಗಿದ್ದು, ಮುಖ್ಯ ಮಾರುಕಟ್ಟೆಯಲ್ಲಿ ಒದಗಿಸಬಹುದಾದ ಎಲ್ಲ ಸೌಕರ್ಯಗಳನ್ನು ರೈತರಿಗೂ ಹಾಗೂ ಮಾರಾಟಗಾರರಿಗೂ ಈ ಉಪ ಮಾರುಕಟ್ಟೆಯಲ್ಲಿ ಸೌಕರ್ಯಗಳನ್ನು ಕಲ್ಪಿಸಿ ಕೊಳ್ಳಲಾಗುವುದೆಂಬ ಭರವಸೆ ನೀಡಲಾಗಿದೆ.